ಮನವಿಗಳು

ಶ್ರೀ ವಿ. ಧನಂಜಯಕುಮಾರ್ (ಮಂಗಳೂರು).—ಮಾನ್ಯ ಅಧ್ಯಕ್ಷರೇ. ಒಂದು ಪ್ರಮುಖ ವಾದಂಥ ಪ್ರಶ್ನೆಯನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಈ ರಾಜ್ಯದ ಬೇರೆ ಬೇರೆ ಕೈಗಾರಿಕೆಗಳಲ್ಲಿ ಕೆಲಸ ಮಾಡುತ್ತಿರುವಂತಹ ಲಕ್ಷಾಂತರ ಮಂದಿ ಕಾರ್ಮಿಕರ ಒಂದು ಕನಿಷ್ಟ ವೇತನವನ್ನು ನಿಗದಿ ಮಾಡುವ ಬಗ್ಗೆ ಈ ಹಿಂದಿನ ಸರ್ಕಾರ ಯಾವ ರೀತಿ ನಡೆದುಕೊಂಡಿದೆ ಎಂಬುದು ಚರಿತ್ರೆಯಲ್ಲಿ ಸೇರಿಹೋಗಿದೆ. ಸರ್ಕಾರ ಕನಿಷ್ಠ ವೇತನ ನಿಗದಿ ಮಾಡಿದ ಬಗ್ಗೆ ಕೆಲವರು ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದರು. ಅನಂತರ

ಅಧ್ಯಕ್ಷರು.—ಇದನ್ನೆಲ್ಲಾ ತಾವು ಕಾರ್ಮಿಕ ಇಲಾಖೆಯ ಬೇಡಿಕೆಗಳು ಬಂದಾಗ ಚರ್ಚೆ ಮಾಡ ಬಹುದು.

ಶ್ರೀ ವಿ. ಧನಂಜಯಕುಮಾರ್.–ಗಂಭೀರವಾದಂಥ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಹೊಸ ಸರ್ಕಾರ ರಚನೆಯಾದ ಮೇಲೆ ಈ ಒಂದು ಸಮಸ್ಯೆಗೆ ಒಂದು ಪರಿಹಾರ ಸಿಗುತ್ತದೆಂದು ಕಾರ್ಮಿಕರು ನಿರೀಕ್ಷೆ ಇಟ್ಟುಕೊಂಡಿದ್ದರು. ಆದರೆ ಈ ಸರ್ಕಾರ ಅಧಿಕಾರಕ್ಕೆ ಬಂದು 8 ತಿಂಗಳಾದ ಮೇಲೂ ಸಹ ಯಾವುದೇ ರೀತಿಯಾದ ಪರಿಹಾರ ಸಿಗದಿರುವ ಕಾರಣ ಸಾವಿರಾರು ಕಾರ್ಮಿಕರು ಭಾರತೀಯ ಮಜದೂರ್ ಸಂಘದ ವತಿಯಿಂದ ಮೆರವಣಿಗೆಯಲ್ಲಿ ಬಂದು ಧರಣಿ ಸತ್ಯಾಗ್ರಹ ಮಾಡು ತ್ತಿದ್ದಾರೆ.

ಅಧ್ಯಕ್ಷರು.—ಇದನ್ನೆಲ್ಲಾ ತಾವು ತಮ್ಮ ನೋಟೀಸ್‌ನಲ್ಲಿ ಹೇಳಿಲ್ಲ. ಯಾವ ವಿಚಾರ ಎಂದು ತಾವು ಇದರಲ್ಲಿ ಹೇಳಿಲ್ಲ, ಜನರಲ್ ಆಗಿ ಹೇಳುತ್ತಿದ್ದೀರಿ. ತಮ್ಮ ನೋಟೀಸ್‌ನಲ್ಲಿ ಈ ರೀತಿ ಹೇಳಿದ್ದೀರಿ:–

"ಕರ್ನಾಟಕ ರಾಜ್ಯದ ಬೇರೆ ಬೇರೆ ಕೈಗಾರಿಕೆಗಳಲ್ಲಿ ದುಡಿಯುವ ಲಕ್ಷಾಂತರ ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿ ಮಾಡುವ ವಿಚಾರದಲ್ಲಿ ರಾಜ್ಯದ ಉಚ್ಚ ನ್ಯಾಯಾಲಯದ ಸ್ಪಷ್ಟ ನಿರ್ದೇಶನ ವಿದ್ದಾಗ್ಯೂ ಸರ್ಕಾರ ಅಲಕ್ಷ್ಯದಿಂದ ವರ್ತಿಸುತ್ತಿದೆ. ಇದರಿಂದ ಕಾರ್ಮಿಕರು ಸತತವಾಗಿ ಮಾಲೀಕರ ಶೋಷಣೆಗೆ ಒಳಗಾಗಿದ್ದಾರೆ. ಅಷ್ಟೇ ಅಲ್ಲ, ಪೋಲೀಸರ ದೌರ್ಜನ್ಯಕ್ಕೂ ಒಳಗಾಗಿ ದ್ದಾರೆ."

334ರ ಪ್ರಕಾರ ಇಲ್ಲಿ ಚರ್ಚೆ ಮಾಡಬೇಕಾದರೆ ಅದು ಸ್ಪೆಸಿಫಿಕ್ ಆಗಿರಬೇಕು. ಆದರೆ ಇಲ್ಲಿ ತಾವು ಹೇಳಿರುವ ವಿಚಾರ ಸ್ಪೆಸಿಫಿಕ್ ಆಗಿಲ್ಲ. ಆದ್ದರಿಂದ ಈ ವಿಚಾರವನ್ನು ಇಲ್ಲಿ ಚರ್ಚೆ ಮಾಡಲು ಬರುವುದಿಲ್ಲ.

ಶ್ರೀ ಎಸ್. ಸೂರ್ಯನಾರಾಯಣರಾವ್.—ಹಾಗಿದ್ದರೆ ಇದರ ಮೇಲೆ ಅರ್ಧ ಗಂಟೆಯ ಚರ್ಚೆ ಗಾದರೂ ಅವಕಾಶ ಮಾಡಿಕೊಡಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾವು ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು.—ಚರ್ಚೆಗೆ ಅವಕಾಶ ಆಗುವುದಿಲ್ಲ.

1-00 p.m.

ಶ್ರೀ ಎಂ. ಎಸ್. ಕೃಷ್ಣನ್.—ನಿಯಮ 64ರ ಪ್ರಕಾರ ಚರ್ಚೆಗೆ ಅವಕಾಶ ಕೊಡಿ.

ಅಧ್ಯಕ್ಷರು.—ತಾವು ನೋಟೀಸ್ ಕಳುಹಿಸಿಕೊಡಿ ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣರಾವ್.—26 ಲಕ್ಷ ಕಾರ್ಮಿಕರು ಹೊಟ್ಟೆಗೆ ಹಿಟ್ಟಿಲ್ಲದೆ ಸಾಯು ತ್ತಿದ್ದಾರೆ. 26 ಲಕ್ಷ ಜನಗಳ ಜೀವನ ಪ್ರಶ್ನೆ ಬಗ್ಗೆ ನಿಯಮ 68ರ ಪ್ರಕಾರ ಚರ್ಚೆಮಾಡುವುದಕ್ಕೆ ಅವಕಾಶ ಮಾಡಿಕೊಡಿ.

Mr. Speaker.—I will have to find some time. I will look into it. I cannot take any decision on hand.

ವಿಷಯ :– ದಾವಣಗೆರೆ ಪೋಲೀಸ್ ಠಾಣೆಯಲ್ಲಿ ಗುಡಿಈರಣ್ಣ ಎಂಬುವನನ್ನು ಹೊಡೆದು ಸಾಯಿಸಿದರು ಎಂಬ ಬಗೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾನು ಒಂದು ವಾರದ ಹಿಂದೆ ತಮಗೊಂದು ನೋಟೀಸ್ ಕಳುಹಿಸಿಕೊಟ್ಟು ಸರ್ಕಾರದ ಹೇಳಿಕೆಯನ್ನು ಬಯಸಿದ್ದೆ. ವಿಷಯ ದಾವಣಗೆರೆ ಪೋಲೀಸ್ ಠಾಣೆಯಲ್ಲಿ ಗುಡಿ ಈರಣ್ಣ ಎಂಬುವರನ್ನು ಹರಪನಹಳ್ಳಿಯಿಂದ ಕರೆದುಕೊಂಡು ಬಂದು ಹೊಡೆದು ಸಾಯಿಸಿದ್ದಾರೆ. ಅದರ ವಿವರಗಳು ಜಾಸ್ತಿ ಇವೆ.

Mr. Speaker.—You have brought it to the notice of the house. Let us not widen the scope. If the Hon' ble Chief Minister has